2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 102/2018

| | | |
|---|---|---|
| ಸಾಕ್ಷಿದಾರರ ಹೆಸರು | - ಕೆ.ಆರ್. ಚಂದ್ರಶೇಖರ | ಪಿಡಬ್ಲೂ -15 |
| ತಂದೆಯ ಹೆಸರು | - ರಾಮಸ್ವಾಮಿ | ಸಿ ಡಬ್ಲ್ಯು- 29 |
| ವಯಸ್ಸು | - 48 ವರ್ಷ | |
| ಉದ್ಯೋಗ | - ಎ.ಎಸ್.ಐ.<br>ಅಜ್ಜಂಪುರ ಪೊಲೀಸ್ ಠಾಣೆ | |
| ವಾಸ ಸ್ಥಳ | - ಕಡೂರು | |

ದಿನಾಂಕಃ 22.12.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

1. ನಾನು 2015 ನೇ ಇಸವಿ ಮೇ ತಿಂಗಳಿನಿಂದ 2020 ನೇ ಜೂನ್ ತಿಂಗಳಿನ ವರೆಗೆ ಕಡೂರು ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಕಡೂರು ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆಃ125/2018 ಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳಾದ ಚಾಸಾ.34 ರವರ ತನಿಖಾ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿದ್ದೆನು. ದಿನಾಂಕಃ14.05.2018 ರಂದು ಬೆಳ್ಳಿಗ್ಗೆ 6 ಗಂಟೆಯಿಂದಲೂ ಚಾಸಾ.34 ರವರ ತನಿಖಾ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಅದೇ ದಿನ ನಾನು ಕಣಿವೆ ಆಂಜನೇಯ ಸ್ವಾಮಿ ದೇವಸ್ಥಾನದ ಹಿಂಬಾಗದಲ್ಲಿ ಇರುವ ಜೋಗಿ ಕಣಿವೆ ಅರಣ್ಯ ಪ್ರದೇಶಕ್ಕೆ ಚಾಸಾ.34 ರವರೊಂದಿಗೆ ಹೋಗಿರುತ್ತೇನೆ. ಅಲ್ಲಿ ಚಾಸಾ.34 ರವರು 1 ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯಂತೆ ತನಿಖೆಯನ್ನು ಕೈಗೊಂಡಿರುತ್ತಾರೆ. ಆ

ಸಮಯದಲ್ಲಿ ಚಾಸಾ.34 ರವರ ಸೂಚನೆಯ ಮೇರೆಗೆ ನಾನು ಇಲಾಖಾ ವತಿಯಿಂದ ಠಾಣೆಗೆ ಒದಗಿಸಲಾಗಿದ್ದ ಡಿಜಿಟಲ್ ಕ್ಯಾಮೆರದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ಸದರಿ ಪೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.4 ರಿಂದ 7 ಎಂದು ಗುರತಿಸಲಾಗಿರುತ್ತದೆ. ನಂತರ ಚಾಸಾ.34 ರವರು ಶವ ತನಿಖೆಯನ್ನು ನಡೆಸಿದ ಸಮಯದಲ್ಲಿ ನಾನು ಅವರ ಸೂಚನೆಯ ಮೇರೆಗೆ ಮೇಲೆ ಹೇಳಿದ ಡಿಜಿಟಲ್ ಕ್ಯಾಮೆರಾದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿಯು ಈಗ 8 ಪೋಟೋಗಳನ್ನು ನೋಡಿ ಗುರುತಿಸಿ ಅವುಗಳನ್ನು ಶವ ತನಿಖಾ ಕಾಲದಲ್ಲಿ ಚಾಸಾ.34 ರವರ ಸೂಚನೆ ಮೇರೆಗೆ ಮೇಲೆ ಹೇಳಿದ ಕ್ಯಾಮೆರಾದಲ್ಲಿ ತೆಗೆದ ಪೋಟೋಗಳು ಅವೇ ಎಂದು ನುಡಿದಿರುತ್ತಾರೆ. ( ಈ ಹಂತದಲ್ಲಿ ಆರೋಪಿ ಪರ ವಕೀಲರು ಸದರಿ ಪೋಟೋಗಳಿಗೆ ಸಂಬಂಧಿಸಿದಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ಸೂಕ್ತವಾದ ದೃಡೀಕರಣ ಪತ್ರವನ್ನು ಸಲ್ಲಿಸದ ಕಾರಣ ಅವುಗಳನ್ನು ನಿಶಾನೆಯನ್ನಾಗಿ ಗುರುತಿಸಲು ಬರುವುದಿಲ್ಲ ಎಂದು ತಕರಾರು ತೆಗೆದಿರುತ್ತಾಜರೆ. ವಿಶೇಷ ಸರ್ಕಾರಿ ಅಭಿಯೋಜಕರು ಸದರಿ ಪೋಟೋಗಳಿಗೆ ಸಂಬಂದಿಸಿದ ಸಿಡಿ ಮತ್ತು ಈ ಸಾಕ್ಷಿಯು ನೀಡಿರುವ ದೃಡೀಕರಣ ಪತ್ರ ವನ್ನು ಹಾಜರುಪಡಿಸಿರುವುದಾಗಿ ನುಡಿದಿರುತ್ತಾರೆ. ಸದರಿ ಸಿಡಿ ಮತ್ತು ದೃಡೀಕರಣ ಪತ್ರ ಕಡತದಲ್ಲಿ ಲಭ್ಯವಿರುತ್ತದೆ ಹಾಗಾಗಿ ಆರೋಪಿ ಪರ ವಕೀಲರ ತಕರಾರನ್ನು ಅಲ್ಲಗಳೆಯಲಾಯಿತು.) ಸದರಿ ಪೋಟೋಗಳನ್ನು ನಿಪಿ.32 ರಿಂದ 39 ಎಂದು ಗುರುತಿಸಲಾಯಿತು.

3. ನಂತರ ಅದೇ ಸ್ಥಳದಲ್ಲಿ ವೈದ್ಯಾದಿಕಾರಿಗಳು ಮೃತ ಶರೀರದ ಮೇಲೆ ಮರಣೋತ್ತರ ಪರೀಕ್ಷೆ ನಡೆಸಿದ್ದು, ಆ ಸಮಯದಲ್ಲಿ ನಾನು ಚಾಸಾ.34 ರವರ ಸೂಚನೆಯ ಮೇರೆಗೆ ಮೇಲೆ ಹೇಳಿದ ಕ್ಯಾಮೆರಾದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ಸದರಿ ಪೋಟೋವನ್ನು ನೋಡುತ್ತಿದ್ದು ಅದನ್ನು ನಿಪಿ.40 ಎಂದು ಗುರುತಿಸಲಾಯಿತು. ನಂತರ ಚಾಸಾ.34 ರವರೊಂದಿಗೆ ಹೊರಟಿರುತ್ತೇನೆ. 1 ನೇ ಆರೋಪಿಯು ಚಾಸಾ.34 ರವರನ್ನು ದೊಡ್ಡಬುಕ್ಕಸಾಗರ ಗ್ರಾಮದಲ್ಲಿರುವ ತನ್ನ ಜಮೀನಿನ ಪಕ್ಕದಲ್ಲಿ ಇರುವ ಪ್ಲಾಂಟೇಶನ್ ನ ಕಚ್ಚಾ ರಸ್ತೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಚಾಸಾ.34 ರವರು ಪಂಚನಾಮೆಯನ್ನು ಜರುಗಿಸಿದ್ದು ಆ ಸಮಯದಲ್ಲಿ ಚಾಸಾ.34 ರವರ ಸೂಚನೆಯ ಮೇರೆಗೆ ಮೇಲೆ ಹೇಳಿದ ಕ್ಯಾಮೆರದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ಸದರಿ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಪೊಟೊಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಪಿ.18 ಎಂದು ಗುರುತಿಸಲಾಗಿರುತ್ತದೆ.

4. ನಂತರ ಕಛೇರಿಗೆ ಹಿಂದಿರುಗಿ ಚಾಸಾ.34 ರವರ ಸೂಚನೆಯ ಮೇರೆಗೆ ಮೇಲೆ ಹೇಳಿದಂತೆ ತಗೆದಿದ್ದ ಪೋಟೋಗಳನ್ನು ಡೇಟಾ ಕೇಬಲ್ ಮೂಲಕ ಕಛೇರಿಯಲ್ಲಿದ್ದ ಕಂಪ್ಯೂಟರ್ ಗೆ ಯಾಥಾ ಸ್ಥಿತಿಯಲ್ಲಿ ವರ್ಗಾಯಿಸಿ ಇಟ್ಟಿರುತ್ತೇನೆ. ದಿನಾಂಕಃ.15.05.2018 ರಂದು ಚಾಸಾ.34 ರವರು ಕಡೂರು ಪೋಲೀಸ್ ಠಾಣಾ ಆವರಣದಲ್ಲಿ 2 ನೇ ಆರೋಪಿಯಿಂದ ಬೈಕನ್ನು ಅಮಾನತ್ತು ಪಡಿಸಿಕೊಳ್ಳುವ ಸಮಯಲ್ಲಿ ಚಾಸಾ.34 ರವರ ಸೂಚನೆಯಂತೆ ಮೇಲೆ ಹೇಳಿದ ಕ್ಯಾಮೆರದಲ್ಲಿ

ಪೋಟೋಗಳನ್ನು ತೆಗೆದಿರುತ್ತೇನೆ. ಸದರಿ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಪೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ.20 ರಿಂದ 22 ಎಂದು ಗುರುತಿಸಲಾಗಿರುತ್ತದೆ. 2 ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯಂತೆ ಚಾಸಾ.34 ರವರು ಸಕರಾಯಪಟ್ಟಣ ಸಮೀದಲ್ಲಿ ಇರುವ ಅಯ್ಯನಕೆರೆಯಲ್ಲಿ ಬೈಕನ್ನು ಅಮಾನತ್ತು ಪಡಿಸಿಕೊಂಡ ಸಮಯಲ್ಲಿ ಚಾಸಾ.34 ರವರ ಸೂಚನೆಯಂತೆ ಮೇಲೆ ಹೇಳಿದ ಕ್ಯಾಮೆರದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ಸದರಿ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಪೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ.24 ರಿಂದ 27 ಎಂದು ಗುರುತಿಸಲಾಗಿರುತ್ತದೆ. ನಂತರ ಕಛೇರಿಗೆ ಹಿಂದಿರುಗಿ ಚಾಸಾ.34 ರವರ ಸೂಚನೆಯ ಮೇರೆಗೆ ಮೇಲೆ ಹೇಳಿದಂತೆ ತಗೆದಿದ್ದ ಪೋಟೋಗಳನ್ನು ಡೇಟಾ ಕೇಬಲ್ ಮೂಲಕ ಕಛೇರಿಯಲ್ಲಿದ್ದ ಕಂಪ್ಯೂಟರ್ ಗೆ ಯಾಥಾ ಸ್ಥಿತಿಯಲ್ಲಿ ವರ್ಗಾಯಿಸಿ ಇಟ್ಟಿರುತ್ತೇನೆ.

5. ದಿನಾಂಕಃ23.05.2018 ರಂದು ಚಾಸಾ.34 ರವರ ಸೂಚನೆಯ ಮೇರೆಗೆ ಕಡೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಮೃತನ ಮರಣೋತ್ತರ ಪರೀಕ್ಷೆ ಮಾಡಿದ ಸದರಿ ಆಸ್ಪತ್ರೆಯ ವೈದ್ಯಾದಿಕಾರಿಗಳು ಸಂಗ್ರಹಿಸಿ ಕೊಟ್ಟಿದ್ದ ಸೀಲ್ ಆಗಿದ್ದ 8 ವಸ್ತುಗಳನ್ನು ತಂದು ಚಾಸಾ.34 ರವರ ಮುಂದೆ ಕಛೇರಿಯಲ್ಲಿಸಿ ಹಾಜರುಪಡಿಸಿರುತ್ತೇನೆ. ಚಾಸಾ.34 ರವರು ಸದರಿ ವಸ್ತುಗಳನ್ನು ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಾನು ಸದರಿ ಪಂಚನಾಮೆಗೆ ಸಹಿಯನ್ನು ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು

ನೋಡಿದರೆ ಗುರುತಿಸುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.29 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.29(ಬಿ) ಎಂದು ಗುರುತಿಸಲಾಯಿತು.

6. ದಿ.25.06.2018 ರಂದು ಮೃತನ ತಂದೆ ಮತ್ತು ತಾಯಿಯಾದ ಚಿನ್ನಪ್ಪ ಮತ್ತು ಯಶೋದಮ್ಮರವರನ್ನು ಕಡೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಾಸಾ.34 ರವರು ಸಲ್ಲಿಸಿಕೊಂಡಿದ್ದ ಮನವಿಯೊಂದಿಗೆ ಹಾಜರುಪಡಿಸಿರುತ್ತೇನೆ. ಸದರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಸದರಿ ಚಿನ್ನಪ್ಪ ಮತ್ತು ಯಶೋದಮ್ಮರವರ ಮಾದರಿ ರಕ್ತವನ್ನು ಸಂಗ್ರಹಿಸಿ ಫ್ರೀಜರ್ ಬಾಕ್ಸ್ ನಲ್ಲಿ ಇಟ್ಟು ಸೀಲ್ ಮಾಡಿ ಕೊಟ್ಟಿದ್ದು ಅದನ್ನು ಪಡೆದುಕೊಂಡು ಬಂದು ಚಾಸಾ.34 ರವರ ಮುಂದೆ ಹಾಜರುಪಡಿಸಿರುತ್ತೇನೆ.

7. ನಂತರ ದಿ.27.06.2018 ರಂದು ತನಿಖಾದಿಕಾರಿಗಳಾಗಿದ್ದ ಚಾಸಾ.35 ರವರ ಸೂಚನೆ ಮೇರೆಗೆ ಮೇಲೆ ಹೇಳಿದಂತೆ ಡಿಜಿಟಲ್ ಕ್ಯಾಮೆರದಲ್ಲಿ ತೆಗೆದು ಕಂಪ್ಯೂಟರ್ ಗೆ ವರ್ಗಾಯಿಸಿದ್ದ ಫೋಟೋಗಳನ್ನು ಒಂದು ಖಾಲಿ ಸಿಡಿಗೆ ವರ್ಗಾಯಿಸಿ ಅವುಗಳನ್ನು ತನಿಖಾಧಿಕಾರಿಗಳಿಗೆ ಪ್ಲೇ ಮಾಡಿ ತೋರಿಸಿ ಆ ಬಗ್ಗೆ ದೃಡೀಕರಣ ಪತ್ರವನ್ನು ನೀಡಿರುತ್ತೇನೆ.

8. ಇಲಾಖಾ ವತಿಯಿಂದ ನನಗೆ ಕಂಪ್ಯೂಟರ್ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ ಮತ್ತು ನಾನು ಕಂಪ್ಯೂಟರ್ ಲಿಟರೆಸಿ ಟೆಸ್ಟ್ ನಲ್ಲಿ ತೇರ್ಗಡೆ ಹೊಂದಿರುತ್ತೇನೆ. ಸದರಿ

ದೃಡೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ.41 ಎಂದು, ಸಾಕ್ಷಿಯ ಸಹಿಯನ್ನು ನಿಪಿ.41(ಎ) ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ವರ್ಗಾಯಿಸಿದ ಸಿಡಿಯನ್ನು ನೋಡುತ್ತಿದ್ದು ಅದನ್ನು ನಿಪಿ.42 ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.35 ರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

9. ನನಗೆ ಫೋಟೋಗಳನ್ನು ತೆಗೆಯುವ ಬಗ್ಗೆ ಮತ್ತು ಅವುಗಳನ್ನು ಕಂಪ್ಯೂಟರ್ ಗೆ ವರ್ಗಾಯಿಸುವ ಬಗ್ಗೆ ಮತ್ತು ಕಂಪ್ಯೂಟರ್ ನಿಂದ ಸಿಡಿಗೆ ವರ್ಗಾಯಿಸುವ ಬಗ್ಗೆ ಪರಿಣಿತಿ ಇರುತ್ತದೆ. ಇಲಾಖಾ ವತಿಯಿಂದ ನನಗೆ ಕಂಪ್ಯೂಟರ್ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ ಮತ್ತು ನಾನು ಕಂಪ್ಯೂಟರ್ ಲಿಟರೆಸಿ ಟೆಸ್ಟ್‌ನಲ್ಲಿ ತೇರ್ಗಡೆ ಹೊಂದಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ ಕೆ.ವಿ.ವೈ. ವಕೀಲರಿಂದಃ ಆರೋಪಿತರ ಪರವಾಗಿ</u>

10.ಸರ್ಕಾರಿದಿಂದ ಇಲಾಖೆಗೆ ಒದಗಿಸಲಾಗಿದ್ದ ಕ್ಯಾಮೆರದಲ್ಲಿ ನಾನು ಪೋಟೋಗಳನ್ನು ತೆಗೆದಿರುತ್ತೇನೆ. ಸದರಿ ಕ್ಯಾಮೆರ ಸೋನಿ ಕಂಪನಿಗೆ ಸೇರಿದ್ದು. ಸದರಿ ಕ್ಯಾಮೆರ ಎಷ್ಟು ಮೆಘಾಪಿಕ್ಸೆಲ್ ದು ಎಂದರೆ ಸಾಕ್ಷಿಯು ನೆನಪಿಲ್ಲ ಎನ್ನುತ್ತಾರೆ. ಸದರಿ ಕ್ಯಾಮೆರಾದಿಂದ ಪೋಟೋಗಳನ್ನು ತೆಗೆದರೆ ಎಷ್ಟು ದೂರದ ವರೆಗೆ ಕವರ್ ಮಾಡಿ ತೆಗೆಯಬಹುದು ಎಂದರೆ ಸಾಕ್ಷಿಯು ಅಂದಾಜು 100 ಮೀ.ದೂರದ ವೆರೆಗೆ ಜೂಮ್ ಮಾಡಿ ತೆಗೆಯಬಹುದು ಎನ್ನುತ್ತಾರೆ.ನಾನು ಡಿಪ್ಲೊಮೋ ಇನ್ ಮ್ಯಾಕಾನಿಕಲ್ ಇಂಜಿನಿಯರ್ ವ್ಯಾಸಂಗ ಮಾಡಿದ್ದೇನೆ. ನಮ್ಮ

ಇಲಾಖೆಯಿಂದ ನನಗೆ ಕಂಪ್ಯೂಟರ್ ಬಗ್ಗೆ ತರಬೇತಿ ನೀಡಲಾಗಿದೆ ಮತ್ತು ನಾನು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಪಾಸ್ ಮಾಡಿದ್ದೇನೆ. ಆ ಬಗ್ಗೆ ಯಾವುದಾದರೂ ತರಬೇತಿ ಪತ್ರವನ್ನು ನಿಮಗೆ ನೀಡಲಾಗಿದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾವುದೇ ಡಿಜಿಟಲ್ ಕ್ಯಾಮೆರದಲ್ಲಿ ಪೋಟೋಗಳನ್ನು ತೆಗೆದರೆ ಅವುಗಳ ಮೇಲೆ ಅವುಗಳನ್ನು ತೆಗೆದ ದಿನಾಂಕ ಮತ್ತು ಸಮಯ ನಮೂದಾಗುತ್ತದೆ ಎಂದರೆ ಸರಿ. ನೀವು ತೆಗೆದಿದ್ದೀರಿ ಎಂದು ಹೇಳಲಾದ ಪೋಟೋಗಳ ಮೇಲೆ ಸದರಿ ದಿನಾಂಕ ಮತ್ತು ಸಮಯ ನಮೂದಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎಲ್ಲಾ ಕ್ಯಾಮೆರದಲ್ಲಿ ಸದರಿ ದಿನಾಂಕ ಮತ್ತು ಸಮಯ ನಮೂದಾಗುವುದಿಲ್ಲ ಎನ್ನುತ್ತಾರೆ.

11. ಚಾಸಾ.35 ರವರಿಗೆ ನೀಡಿದ ಹೇಳಿಕೆಯಲ್ಲಿ ಆಂಜನೇಯ ಸ್ವಾಮಿ ದೇವಾಲಯದ ಹಿಂದೆ ಇರುವ ಕಣಿವೆ ಅರಣ್ಯ ಪ್ರದೇಶಕ್ಕೆ ಅಯ್ಯನಕೆರೆಗೆ ಮತ್ತು 1 ನೇ ಆರೋಪಿಯ ಜಮೀನಿನ ಹತ್ತಿರ ನೀವು ಹೋಗಿದ್ದಾಗಿ ತಿಳಿಸಿದ್ದೀರ ಎಂದರೆ ಸಾಕ್ಷಿ ಆ ರೀತಿ ನಿರ್ದಿಷ್ಟವಾಗಿ ತಿಳಿಸಿಲ್ಲ ಎನ್ನುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ವಿಡಿಯೋವನ್ನು ಮಾಡಿಕೊಂಡಿಲ್ಲ. ತನಿಖಾ ಕಾಲದಲ್ಲಿ ಬೇರೆಯಾರಾದರೂ ವಿಡಿಯೋವನ್ನು ಮಾಡಿಕೊಂಡಿದ್ದಾರೆಯೇ ಎಂದರೆ ಸಾಕ್ಷಿಯು ಬೇರೆ ಸಿಬ್ಬಂದಿ ಮಾಡಿದ್ದಾರೆ ಎನ್ನುತ್ತಾರೆ.

12. ವೈದ್ಯಾಧಿಕಾರಿಗಳಿಂದ ಸೀಲಾದ ವಸ್ತುಗಳನ್ನು ಪಡೆದುಕೊಂಡು ಬಂದು ತನಿಖಾಧಿಕಾರಿಗಳಿಗೆ

ಹಾಜರುಪಡಿಸಿರುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮೃತನ ತಂದೆ ತಾಯಿಯ ಮಾದರಿ ರಕ್ತವನ್ನು ಪಡೆದು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.41 ದೃಡೀಕರಣ ಪತ್ರವನ್ನು ಕಾನೂನಾತ್ಮಕವಾಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ